ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ,ಮಲ್ಲೇಶ್ವರಂ,ಬೆಂಗಳೂರು -12

ಸಂಖ್ಯೆ : ಪಪೂಶಿಇ/ಶೈಶಾ/ಪ್ರುಪಿದಾ2022-23 ದಿನಾಂಕ: 11 .07.2022

## ಸುತ್ತೋಲೆ

ವಿಷಯ : ಪ್ರಥಮ ಪಿಯುಸಿ ತರಗತಿಗಳಿಗೆ ದಾಖಲಾತಿ ದಿನಾಂಕವನ್ನು ವಿಸ್ತರಿಸುವ ಕುರಿತು.

ಉಲ್ಲೇಖ: 1. ಪದವಿ ಪೂರ್ವ ಶಿಕ್ಷಣ ಇಲಾಖಾ ದಾಖಲಾತಿ ಮಾರ್ಗಸೂಚಿ 2022-23.

2.DPUE-ACA0OTH/15/2022-ACADEMIC-DEPARTMENT OF PRE UNIVERSITY EDUCATION, ದಿನಾಂಕ: 07.06.2022.

****

2022-23ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಪಿಯುಸಿಗೆ ಸಂಬಂಧಿಸಿದಂತೆ ದಾಖಲಾತಿ ದಿನಾಂಕವನ್ನು **11.07.2022**ರವರೆಗೆ ದಂಡರಹಿತವಾಗಿ ಉಲ್ಲೇಖ-2ರಲ್ಲಿ ತಿಳಿಸಿರುವಂತೆ ವಿಸ್ತರಿಸಲಾಗಿತ್ತು. ಆದರೆ ಸಿಬಿಎಸ್ಇ ಹಾಗೂ ಐಸಿಎಸ್‌ಸಿ ಬೋರ್ಡ್‌ಗಳಲ್ಲಿ 10ನೇ ತರಗತಿ ಫಲಿತಾಂಶ ಪ್ರಕಟಣೆಯು ತಡವಾಗುತ್ತಿರುವ ಹಿನ್ನಲೆಯಲ್ಲಿ ಹಾಗೂ ಅನೇಕ ಪೋಷಕರು ಹಾಗೂ ವಿದ್ಯಾರ್ಥಿಗಳು ದಾಖಲಾತಿ ದಿನಾಂಕವನ್ನು ವಿಸ್ತರಿಸಲು ಮನವಿ ಮಾಡಿರುತ್ತಾರೆ. ದಂಡಶುಲ್ಕ ರಹಿತವಾಗಿ ಪ್ರಥಮ ಪಿಯುಸಿ ದಾಖಲಾತಿ ದಿನಾಂಕವನ್ನು **ದಿ: 12.07.2022 ರಿಂದ 30.07.2022 ರವರೆಗೆ** ವಿಸ್ತರಿಸಿ ಆದೇಶಿಸಿದೆ.

**ವಿ.ಸೂ. ಮೇಲಿನ ದಾಖಲಾತಿ ವಿಸ್ತರಣೆ ದಿನಾಂಕವು ಪ್ರಥಮ ಪಿಯುಸಿ ದಾಖಲಾತಿಗೆ ಮಾತ್ರ ಅನ್ವಯಿಸುತ್ತದೆ.**

| ದಂಡ ಶುಲ್ಕವಿಲ್ಲದ ದಾಖಲಾತಿಗೆ, ವಿಸ್ತರಿಸಿದ ಕೊನೆಯ ದಿನಾಂಕ. | ವಿಳಂಬ ದಾಖಲಾತಿ ರೂ.670/- (ಆರುನೂರ ಎಪ್ಪತ್ತು) ದಂಡ ಶುಲ್ಕದೊಂದಿಗೆ ವಿಸ್ತರಿದ ಕೊನೆಯ ದಿನಾಂಕ. | ವಿಶೇಷ ದಂಡ ಶುಲ್ಕ ರೂ.2890/-ರೊಂದಿಗೆ ದಾಖಲಾತಿಗೆ ವಿಸ್ತರಿಸಿದ ಕೊನೆಯ ದಿನಾಂಕ. |
|---|---|---|
| **30.07.2022** | **06.08.2022** | **12.08.2022** |

**2022-23ರ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ದಾಖಲಾತಿ ಶುಲ್ಕಗಳನ್ನು ಸಂಗ್ರಹಿಸುವುದು. ಈ ರೀತಿ ಸಂಗ್ರಹಿಸಿದ ಶುಲ್ಕಗಳನ್ನು ಸರ್ಕಾರ /ಇಲಾಖೆಗೆ ದಾಖಲಾತಿ ದಿನಾಂಕ ಮುಗಿದ ಮಾರನೇ ಕಾರ್ಯನಿರತ ದಿನಾಂಕದಂದು (ದಂಡ ಶುಲ್ಕ ಹಾಗೂ ವಿಶೇಷ ದಂಡ ಶುಲ್ಕ) ಖಜಾನೆಗೆ ಶುಲ್ಕಗಳನ್ನು ಕಡ್ಡಾಯವಾಗಿ ಜಮಾ ಮಾಡುವುದು. ಈ ಸಂಬಂಧ ಪ್ರಾಂಶುಪಾಲರು/ ಆಡಳಿತ ಮಂಡಳಿಯವರು ಪೂರ್ಣ ಜವಾಬ್ದಾರರಾಗಿರುತ್ತಾರೆ.**

ನಿರ್ದೇಶಕರು.
ಪದವಿ ಪೂರ್ವ ಶಿಕ್ಷಣ ಇಲಾಖೆ.

Scanned with CamScanner

ಕ್ರಮಕ್ಕಾಗಿ:

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರುಗಳಿಗೆ.
2. ಸಹಾಯಕ ನಿರ್ದೇಶಕರು, ಇ-ಆಡಳಿತ- ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಇ-ಮೇಲ್ ವಿಳಾಸಕ್ಕೆ ಕಳುಹಿಸಲು ಹಾಗೂ ಇಲಾಖಾ ಜಾಲತಾಣದಲ್ಲಿ ಅಳವಡಿಸಲು.

ಮಾಹಿತಿಗಾಗಿ:

1. ಆಪ್ತ ಕಾರ್ಯದರ್ಶಿಗಳು, ಮಾನ್ಯ ಶಾಲಾ ಮತ್ತು ಸಾಕ್ಷರತಾ ಇಲಾಖೆ ಹಾಗೂ ಸಕಾಲ ಸಚಿವರು, ಬೆಂಗಳೂರು.
2. ಆಪ್ತ ಕಾರ್ಯದರ್ಶಿಗಳು, ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಾಲಾ ಮತ್ತು ಸಾಕ್ಷರತಾ ಇಲಾಖೆ ಬೆಂಗಳೂರು.
3. ಕಛೇರಿ /ಹೆಚ್ಚುವರಿ.

Scanned with CamScanner